
# ಮರೆಯಾಗುತ್ತಿರುವ ಕಡೆಗೋಲು



ನಾಲ್ಕೈದು ದಶಕಗಳ ಹಿಂದೆ ಬೆಳಿಗ್ಗೆನಾವೆಲ್ಲಾ ಇನ್ನೂ ಸಕ್ಕರೆ ನಿದ್ದೆಯಲ್ಲಿರುವಾಗ ಅಡುಗೆ ಮನೆಯಿಂದ 'ಸೊರ್ ಬುರ್' ಎಂಬ ಶಬ್ದ ಕೇಳಿ ಬರುತ್ತಿತ್ತು. ಅದು ಮಜ್ಜಿಗೆ ಕಡೆಯುವ ಶಬ್ದ. ನಮ್ಮದೆ ಹೊಟೇಲಿನಿಂದ ಕೆನೆಯನ್ನು ಒಟ್ಟು ಮಾಡಿ ತಂದು, ಎರಡು ದಿನಗಳಿಗೊಮ್ಮೆ ಕಡೆದು, ಬೆಣ್ಣೆ ತೆಗೆದು, ಮಜ್ಜಿಗೆ ಮಾಡಿ, ಊಟಕ್ಕೆ ಬಡಿಸುತ್ತಿದ್ದರು. ಕಡಗೋಲಿನಿಂದ ಮಾಡಿದ ಮಜ್ಜಿಗೆಯೆಂದರೆ ಎಲ್ಲರಿಗೂ ಇಷ್ಟ. ಅದರ ರುಚಿಯೇ ಬೇರೆ. ಬೆಣ್ಣೆಕಾಯಿಸಿ, ತುಪ್ಪ ಮಾಡಿ ಉಪಯೋಗಿಸುತ್ತಿದ್ದರು. ಮಜ್ಜಿಗೆ ಕಡೆಯಲೆಂದೇ ಮನೆಯ ಮೂಲೆಯಲ್ಲಿ ಒಂದು ಪುಟ್ಟ ಕಂಭವನ್ನು ನೆಟ್ಟಿರುತ್ತಿದ್ದರು. ಅದಕ್ಕೆ ಎರಡು ಹಗ್ಗಗಳಿರುತ್ತಿದ್ದವು. ವಿಶೇಷ ದಿನಗಳಲ್ಲಿ ಇದಕ್ಕೂ ಪೂಜೆ ಸಲ್ಲುತ್ತಿತ್ತು. ಈಗ ಮನೆಗಳಲ್ಲಿ ಮಜ್ಜಿಗೆ ಕಡೆದು, ಬೆಣ್ಣೆ ತೆಗೆದು, ತುಪ್ಪ ಮಾಡುವುದನ್ನು ಬಹುತೇಕರು ಮರೆತು ಬಿಟ್ಟಿದ್ದಾರೆ. ಬೇಕಿದ್ದಾಗ ಅಂಗಡಿಗೆ ಹೋಗಿ ಮೊಸರು, ತುಪ್ಪ ತಂದು ಉಪಯೋಗಿಸುತ್ತಿದ್ದಾರೆ. ಒಂದೊಂದೇ ಸಾಮಾನುಗಳು ನಿಧಾನವಾಗಿ ಮೂಲೆಗೆ ಸೇರುತ್ತಲಿವೆ.

—ಮನೋಜ್ ಕುಮಾರ್ ಕೆ.,
ಬೆಂಗಳೂರು



# ಪಪ್ಪಾಯಿ ಮರ!

ಸಾಮಾನ್ಯವಾಗಿ ಪಪ್ಪಾಯಿ ಮರಗಳು ಶೀಘ್ರ ಬೆಳೆಯುವ, ತೊಗಟೆಗಳಿಲ್ಲದ ಮೃದು ಕಾಂಡ ಹೊಂದಿರುವ ಏಕ ದಿಂಡಿನ ಮರಗಳು. ಮಂಗಳೂರಿನ ಬೆಳುವಾಯಿ ಬಳಿಯ ದರೆಗುಡ್ಡೆಯ ನನ್ನ ಸೋದರನ ಮನೆಗೆ ಹೋಗಿದ್ದಾಗ ರೆಂಬೆಗಳೊಂದಿಗೆ ಬೆಳೆದು ನಿಂತು ಕಾಯಿ ಬಿಟ್ಟಿರುವ ಪಪ್ಪಾಯಿ ಮರ ನೋಡಿ ಆಶ್ಚರ್ಯವಾಯಿತು. ಕೃಷಿಕ ಸೋದರನನ್ನು ವಿಚಾರಿಸಿದಾಗ, 'ಅದರ ಚಿಗುರಿನ ತುದಿಯನ್ನು ಎಳೆಯ ಸಸಿಯಾಗಿರುವಾಗಲೇ ಕತ್ತರಿಸಿದರೆ ಕಾಂಡ ದಪ್ಪವಾಗುತ್ತದೆ ಮತ್ತು ಸಸಿ ಬಲಿತ ಮೇಲೆ ತುದಿ ಕತ್ತರಿಸಿ ಮೇಲೆ ಪ್ಲಾಸ್ಟಿಕ್ ಹೊದ್ದು ಕಟ್ಟಿದರೆ ಸಸ್ಯ ಹೆಚ್ಚು ಉದ್ದವಾಗಿ ಬೆಳೆಯದೆ ಹೀಗೆ ಬೆಳೆದು ಕಾಯಿ ಬಿಡುತ್ತವೆ' ಎಂದು ವಿವರಿಸಿದ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ




# ಏನೀ ಸಂದೇಶ

ಹಾಸನ ನಗರದ ಮಲ್ಲಿಗೆ ರೆಸಿಡೆನ್ಸಿ ಎದುರು ರಸ್ತೇಲಿ ಸಾಗಿದರೆ ರಸ್ತೆ ಬದಿ ಚಿತ್ರದಲ್ಲಿರುವ ಕಲಾಕೃತಿ ಗೋಚರಿಸುತ್ತದೆ. ಮರದ ತುಂಡಿನಲ್ಲಿ ಅಭಯ ಹಸ್ತ, ಅದರೊಳಗೆ ಮಗು ಮಲಗಿರುವಂತೆ ಕೆತ್ತನೆ ಮಾಡಲಾಗಿದೆ. ಕಲಾಕೃತಿ ಸುತ್ತಲೂ ಕಟ್ಟೆಯನ್ನು ಕಟ್ಟಲಾಗಿದೆ. ಮನುಕುಲಕ್ಕೆ ಅದ್ಯಾವುದೋ ಸುಪ್ತ ಸಂದೇಶವನ್ನು ಈ ಕಲಾಕೃತಿ ಸಾರುತ್ತಿದೆ ಎಂದೆನಿಸುತ್ತದೆ.

—ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ